ವಿಭಾಗದಲ್ಲಿ ನಾಟಕದ ಕೋರ್ಸ್‌ಗೆ ಅತಿಥಿ ಉಪನ್ಯಾಸಕ ಹುದ್ದೆ ಕೈಬೀಸಿ ಕರೆದಿತ್ತು. ಕೆಲಸಕ್ಕೆ ಸೇರಿ ಎರಡೂವರೆ ವರ್ಷ. ಏಕತಾನತೆ ಕಾಡಲು ಆರಂಭಿಸಿತು.

'ಅಲೆಮಾರಿ ಜೀವನ ರೂಢಿಯಾಗಿದ್ದ ನನಗೆ ಬೆಳಿಗ್ಗೆ ಕೆಲಸಕ್ಕೆ ಹೋಗುವುದು, ಪಾಠ ಮಾಡುವುದು, ಮತ್ತೆ ಸಂಜೆ ಮನೆಗೆ ಬರುವುದು ಇವೆಲ್ಲಾ ನೀರಸ ಎನಿಸಿತು. ಇದರ ಹೊರತಾಗಿ ಇನ್ನೇನೋ ಇದೆ ಎಂಬುದು ನನ್ನನ್ನು ಕಾಡುತ್ತಲೇ ಇತ್ತು. ಒಂದೇ ಕಡೆಗೆ ಸಿಕ್ಕಿಹಾಕಿಕೊಳ್ಳುತ್ತೇನಾ ಎಂಬ ಆತಂಕ ಮೂಡುತ್ತಿದ್ದಂತೆ ಕಾಲ್ಕಿತ್ತು ರಂಗಭೂಮಿಗೆ ಮರಳಿದೆ. ನಾಟಕಗಳ ನಿರ್ದೇಶನದಲ್ಲಿ ತೊಡಗಿಕೊಂಡೆ. ಮತ್ತೆ ಮತ್ತೆ ರಂಗಭೂಮಿ ನನ್ನನ್ನು ಕರೆಸಿಕೊಳ್ಳುತ್ತಲೇ ಇತ್ತು' ಎಂದು ರಂಗಭೂಮಿಯ ಸೆಳೆತವನ್ನು ವಿವರಿಸುತ್ತಾರೆ.

ಕೆ.ಎಂ. ಚೈತನ್ಯ ಅವರ 'ಕುಸುಮಬಾಲೆ' ಟೆಲಿಫಿಲ್ಮ್‌ನಲ್ಲಿ ನಟಿಸುತ್ತಿದ್ದಂತೆ 'ಮುಗಿಲು', 'ಅಪ್ಪ', 'ಸಂಬಂಧ' ಹೀಗೆ ಒಂದಷ್ಟು ಧಾರಾವಾಹಿಗಳ ಮೂಲಕ ಪರಿಚಿತರಾದರು. ಕಿರುತೆರೆಯಲ್ಲಿ ಸಾಕಷ್ಟು ಕಾಲ ಉಳಿದುಕೊಳ್ಳದೇ, ರಂಗಭೂಮಿಯಲ್ಲಿ ನಿರ್ದೇಶನ, ಲೈಟಿಂಗ್, ಸೆಟ್, ಕಾಸ್ಟ್ಯೂಮ್, ತೆರೆಹಿಂದಿನ ಕೆಲಸಗಳಲ್ಲಿ ತಮ್ಮನ್ನು ತಾವು ಪಳಗಿಸಿಕೊಂಡರು.

ಮೂವತ್ತಕ್ಕಿಂತ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿ, ಎಂಟು ನಾಟಕಗಳಿಗೆ ನಿರ್ದೇಶನ ಮಾಡಿದ್ದ ಅವರಿಗೆ ಹಿರಿತೆರೆಯಲ್ಲಿ ಅವಕಾಶಗಳ ಕದ ತೆರೆದುಕೊಂಡಿತು. ಮೊಟ್ಟಮೊದಲು 'ಹೊಂಗನಸು' ಚಿತ್ರದಲ್ಲಿ ಪುಟ್ಟ ಪಾತ್ರಕ್ಕೆ ಬಣ್ಣ ಹಚ್ಚಿದ ಅವರು, ನಂತರ 'ಒಲವೇ ಜೀವನ ಲೆಕ್ಕಾಚಾರ', 'ಮುದ್ದು ಮನಸೇ', 'ಬೆಂಕಿಪಟ್ಣ' ಚಿತ್ರಗಳಲ್ಲಿ ಬಂದು ಹೋಗುವ ಪಾತ್ರಗಳಲ್ಲಿ ಕಾಣಿಸಿಕೊಂಡರು.

ಸುಮನಾ ಕಿತ್ತೂರು ನಿರ್ದೇಶಿಸಿದ 'ಕಿರಗೂರಿನ ಗಯ್ಯಾಳಿಗಳು', ಸಂಪತ್ ಅವರ ಸಾಮರ್ಥ್ಯಕ್ಕೆ ಕನ್ನಡಿ ಹಿಡಿಯಿತು. 'ಪಟಾಕಿ', 'ಶ್ರೀಕಂಠ' ಸಿನಿಮಾಗಳಲ್ಲಿ ನಟಿಸಿದ ಸಂಪತ್, ಚಿಕ್ಕ ಪಾತ್ರವನ್ನೂ ಚೊಕ್ಕದಾಗಿ ನಿರ್ವಹಿಸುವವರು ಎಂದು ತೋರಿದ್ದು 'ಕೆಜಿಎಫ್' ಸಿನಿಮಾ. 'ಕೆಜಿಎಫ್' ಚಿತ್ರೀಕರಣ ಸಮಯದಲ್ಲಿಯೇ 'ಕವಲುದಾರಿ' ಅವಕಾಶ ಹುಡುಕಿಕೊಂಡು ಬಂತು. ರಾಜಕಾರಣಿ ಪಾತ್ರದಲ್ಲಿ ತಮ್ಮ ವಿಶೇಷ ನಟನಾ ವೈಖರಿಯಿಂದ ಜನಮನ ಸೆಳೆದ ಸಂಪತ್, ತಮ್ಮನ್ನು ತಾವು 'ಕ್ಯಾರೆಕ್ಟರ್ ಆರ್ಟಿಸ್ಟ್' ಎಂದು ಅಲ್ಲಿ ನಿರೂಪಿಸಿಕೊಂಡರು. ಅಲ್ಲಿಂದ ಹಲವು ಅವಕಾಶಗಳು ಸಂಪತ್ ಅವರಿಗೆ ಎಡತಾಕಿದವು.

'ಎಲ್ಲಾ ರೀತಿಯ ಪಾತ್ರಗಳನ್ನೂ ಸಮರ್ಥವಾಗಿ ನಿಭಾಯಿಸುವ ಪ್ರಯತ್ನ ಮಾಡುತ್ತೇನೆ' ಎನ್ನುವ ಸಂಪತ್, ತಮ್ಮ ಕೌಶಲಕ್ಕೆ ಯಾವುದೇ ಚೌಕಟ್ಟು ಹಾಕಿಕೊಳ್ಳಲು ಒಪ್ಪುವವರಲ್ಲ. ಪೌರಾಣಿಕ, ಐತಿಹಾಸಿಕ ಸಿನಿಮಾಗಳೊಂದಿಗೆ, ನೆಲಮೂಲ ಸಂಸ್ಕೃತಿ ಬಿಂಬಿಸುವ ಚಿತ್ರಗಳಲ್ಲಿ ನಟಿಸುವ ಇರಾದೆ ವ್ಯಕ್ತಪಡಿಸುವ ಅವರಿಗೆ, ಕಬೀರ, ಪುರಂದರದಾಸ, ಕನಕದಾಸರಂಥ ಆಧ್ಯಾತ್ಮಿಕ ಚಿಂತಕರನ್ನು, ಸಮಾಜಕ್ಕೆ ತಮ್ಮ ಚಿಂತನೆಗಳ ಕೊಡುಗೆ ನೀಡಿದವರ ವ್ಯಕ್ತಿತ್ವವನ್ನು ತಮ್ಮ ನಟನೆ ಮೂಲಕ ಪರಿಣಾಮಕಾರಿಯಾಗಿ ಕಟ್ಟಿಕೊಡುವ ಮಹದಾಸೆಯಿದೆ.

'ಪ್ರತಿಯೊಂದು ಪಾತ್ರವೂ ನನ್ನೊಳಗಿನ ನಟನನ್ನು ವಿಸ್ತರಿಸುತ್ತಾ ಹೋಗುತ್ತದೆ' ಎನ್ನುವ ಅವರು, 'ಕಲಾವಿದನು ಎಲ್ಲರನ್ನೂ ಪ್ರೀತಿ ಮಾಡುವುದನ್ನು ಕಲಿಯಬೇಕು. ಅದೆಂಥ ಪ್ರೀತಿಯೆಂದರೆ, ಪ್ರಕೃತಿಯ ರೀತಿ' ಎನ್ನುತ್ತಾರೆ.

'ಯಾವುದೇ ಕ್ಷೇತ್ರಕ್ಕೆ ಹೋದರೂ ಅದರದ್ದೇ ಆದ ಪರಿಶ್ರಮ ಅಗತ್ಯವಿರುತ್ತದೆ. ಅದಕ್ಕೆ ಸೂಕ್ತ ತಯಾರಿ ಬೇಕು. ಈ ಮಾಯಾಲೋಕದಲ್ಲಿ ಏನೋ ಮಾಡುತ್ತೇನೆ ಎಂದು ಬಂದವರು ತಯಾರಿಯಿಲ್ಲದೇ ಸೊರಗುತ್ತಾರೆ. ನಟನೆಗೆ ಸಿದ್ಧಸೂತ್ರವೆಂಬುದೇ ಇಲ್ಲ. ಇದನ್ನು ಅರಿಯದೇ ಮಾದರಿಗಳನ್ನಿಟ್ಟುಕೊಂಡು ಸಿಲುಕಿಕೊಳ್ಳುತ್ತಾರೆ' ಎಂದು ಹೊಸಬರಿಗೆ ಕಿವಿಮಾತನ್ನೂ ಹೇಳುತ್ತಾರೆ. ಸಂಪತ್ ಕುಮಾರ್ ನಟನೆಯ ಸಾಲು ಸಾಲು ಸಿನಿಮಾಗಳು ಬಿಡುಗಡೆಯ ಪಟ್ಟಿಯಲ್ಲಿವೆ. ಸದ್ಯ ಕೊಳೆಗೇರಿ ಕುಟುಂಬವೊಂದರ ಭಾವನಾತ್ಮಕ ಕಥೆ 'ಜೋರ್ಡನ್' ತೆರೆಕಂಡಿದೆ. ಸಂಪತ್ ಅವರ ನಟನೆಯ ಇನ್ನಷ್ಟು ವಿಷಯಾಧಾರಿತ ಚಿತ್ರಗಳು ತೆರೆಕಾಣಲು ಸಿದ್ಧಗೊಳ್ಳುತ್ತಿವೆ.

'ಮಾರಿ ಗೋಲ್ಡ್', 'ಮಾರೀಚ', '20/20', 'ಕಲ್ ಸಕ್ರೆ', 'ಒಂದು ರವಿಕೆಯ ಪ್ರಸಂಗ', 'ಟೇಲ್ಸ್ ಆಫ್ ಮಹಾನಗರ್', 'ದೊಡ್ಡಟ್ಟಿ ಬೋರೇಗೌಡ', '102021', 'ಮೂರನೇ ಕೃಷ್ಣಪ್ಪ', 'ಕಾಲಾ ಪತ್ತರ್', 'ಅನ್ನ' ಸಿನಿಮಾಗಳು ಬಿಡುಗಡೆಯಾಗಬೇಕಿದ್ದು, 'ಅಶೋಕ ಬ್ಲೇಡ್', 'ಕಾಲಾ ಬಜಾರ್', 'ಕೆರೆ ಬೇಟೆ', 'ಮುಟ್ಟಿಸಿಕೊಂಡವನು', 'ಹಳದಿ ಬಸ್' ಚಿತ್ರಗಳ ಚಿತ್ರೀಕರಣ ನಡೆಯುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in

# ಗ್ಯಾಂಗ್‌ಸ್ಟರ್ ಆಗಿ ವಿಕ್ರಮ್

'ತ್ರಿವಿಕ್ರಮ' ಸಿನಿಮಾ ಮೂಲಕ ಸ್ಯಾಂಡಲ್‌ವುಡ್ ಅಂಗಳ ಪ್ರವೇಶಿಸಿದ್ದ ಕ್ರೇಜಿಸ್ಟಾರ್ ಪುತ್ರ ವಿಕ್ರಮ್ ರವಿಚಂದ್ರನ್ ಮತ್ತೊಂದು ಸಿನಿಮಾಗೆ ಸಜ್ಜಾಗಿದ್ದಾರೆ. ಈ ಬಾರಿ ಗ್ಯಾಂಗ್‌ಸ್ಟರ್ ವಿಷಯದ ಸಿನಿಮಾ ಆಯ್ಕೆ ಮಾಡಿಕೊಂಡಿದ್ದು, ಚಿತ್ರದ ಮುಹೂರ್ತ ನೆರವೇರಿದೆ.

ತಮಿಳು, ತೆಲುಗು ಚಿತ್ರರಂಗದಲ್ಲಿ ಸಹ ನಿರ್ದೇಶಕನಾಗಿ, ಸಿನಿಮಾ ಬರಹಗಾರನಾಗಿ ಗುರುತಿಸಿಕೊಂಡಿರುವ ಕಾರ್ತಿಕ್ ರಾಜನ್ ನಿರ್ದೇಶನದ ಮೊದಲ ಸಿನಿಮಾ ಇದು. ಗ್ಯಾಂಗ್‌ಸ್ಟರ್ ವಿಷಯಾಧಾರಿತವಾದ ಈ ಚಿತ್ರದ ಕಥೆ ಕೇಳಿ ವಿಕ್ರಮ್ ರವಿಚಂದ್ರನ್ ಗ್ರೀನ್ ಸಿಗ್ನಲ್ ನೀಡಿದ್ದು, ಎರಡನೇ ಸಿನಿಮಾದಲ್ಲಿ ಮಾಸ್ ಹೀರೊ ಆಗಿ ತೆರೆ ಮೇಲೆ ಮಿಂಚಲು ಸಕಲ ರೀತಿಯಲ್ಲೂ ಸಜ್ಜಾಗುತ್ತಿದ್ದಾರೆ.

ಕನ್ನಡದಲ್ಲಿ 'ಹೆಡ್ ಬುಷ್' ಸಿನಿಮಾದಲ್ಲಿ ಸಹ ನಿರ್ದೇಶಕನಾಗಿ ಕೆಲಸ ಮಾಡಿರುವ ಕಾರ್ತಿಕ್ ರಾಜನ್ ಇದೇ ಮೊದಲ ಬಾರಿಗೆ ನಿರ್ದೇಶಕನ ಟೋಪಿ ತೊಡುತ್ತಿದ್ದಾರೆ.

ಚಿತ್ರದ ಪ್ರಿ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ಸದ್ಯದಲ್ಲೇ ಶೀರ್ಷಿಕೆ, ತಾರಾಬಳಗ, ತಂತ್ರಜ್ಞರು ಹಾಗೂ ಸಿನಿಮಾ ಬಗ್ಗೆ ಹೆಚ್ಚಿನ ಮಾಹಿತಿ ಹಂಚಿಕೊಳ್ಳುವುದಾಗಿ ನಿರ್ದೇಶಕ ಕಾರ್ತಿಕ್ ರಾಜನ್ ತಿಳಿಸಿದ್ದಾರೆ. ಜನವರಿಯಲ್ಲಿ ಚಿತ್ರೀಕರಣ ಆರಂಭವಾಗಲಿದ್ದು, ಎಸ್. ತಮನ್ ಜೊತೆ ಕೆಲಸ ಮಾಡಿ ಅನುಭವ ಇರುವ ಯುವರಾಜ್, ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ.

